ಸರಿಪಡಿಸುತ್ತೇನೆ. ಒಂದು ವೇಳೆ ಫ್ರಿಂಟ್‌ನಲ್ಲಿ ಬಿಟ್ಟು ಹೋಗಿದ್ದೇ ನಿಜವಾದರೆ ತಕ್ಷಣ ಅದನ್ನು ಇನ್‌ಕ್ಲೂಡ್ ಮಾಡಿಸುತ್ತೇನೆ.

4) ವೃತ್ತಿ ಶಿಕ್ಷಣ ನೌಕರರು 5 ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ವೃತ್ತಿ ಶಿಕ್ಷಣ ನೌಕರರು ಕಳೆದ 5 ದಿವಸಗಳಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. ಬಹುಶಃ ರಾಜ್ಯದ 80 ಸಾವಿರ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಂತಹ, ಅವರಿಗೆ ಸ್ವಾವಲಂಬಿ ಜೀವನವನ್ನು ಕೊಡುವಂತಹ ಶಿಕ್ಷಣವನ್ನು ಕೊಡುವಂತಹ ಶಿಕ್ಷಕರೇ ಇವತ್ತು ತಮ್ಮ ವೃತ್ತಿಯಲ್ಲಿ ಅತಂತ್ರರಾಗಿದ್ದಾರೆ. ತಮ್ಮ ನ್ಯಾಯಯುತ ಬೇಡಿಕೆ ಈಡೇರಿಸಲು ಅವರು ಕೋರಿದ್ದಾರೆ. ತಮ್ಮನ್ನು ಖಾಯಮಾತಿಗೊಳಿಸಿ ಕೇವಲ ಎಂಟು ತಿಂಗಳಲ್ಲಿ ಮಾತ್ರ ತಮಗೆ ಬೇಕಾದಂತಹ ಸಂಬಳ, ಆದೂ ಕೂಡ ನಿಗದಿತ ಸಂಬಳ ಮಾತ್ರ ಬರುತ್ತಿದೆ. ಈ ನಿಟ್ಟಿನಲ್ಲಿ ತಮ್ಮನ್ನು ಖಾಯಮಾತಿಗೊಳಿಸಬೇಕೆಂದು ಹೇಳಿ ಕಳೆದ ಐದು ದಿವಸಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಡೆಸಿದ ವಿವಿಧ ಹೋರಾಟದ ಸಮಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಖುದ್ದಾಗಿ ಮೂರು ತಿಂಗಳಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟ ಹಿನ್ನೆಲೆಯಲ್ಲಿ ಅವರು ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದರು. ಒಂದು ವರ್ಷಕಾದರೂ, ಆದರಿಂದ ಯಾವುದೇ ಫಲಿತಾಂಶ ಬಾರದಿರುವ ಹಿನ್ನೆಲೆಯಲ್ಲಿ ಇವತ್ತು ಅನಿವಾರ್ಯವಾಗಿ ಉಪವಾಸ ಮಾಡುತ್ತಿದ್ದಾರೆ. ಉಪವಾಸ ನಿರತ 5 ಮಂದಿ ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ 2,361 ವೃತ್ತಿ ಶಿಕ್ಷಣ ನೌಕರರನ್ನು ತಾವು ದಯವಿಟ್ಟು ಖಾಯಮಾತಿಗೊಳಿಸಬೇಕು, ರಾಜ್ಯ ಸರ್ಕಾರಕ್ಕೆ ಇದರಿಂದ ಕೇವಲ 7 ಕೋಟಿ ರೂಪಾಯಿಗಳಷ್ಟು ಮಾತ್ರ ಹೊರೆ ಬೀಳುತ್ತದೆ. ಹೀಗೆ ಮಾಡಿದಲ್ಲಿ ಸುಮಾರು 80 ಸಾವಿರ ವಿದ್ಯಾರ್ಥಿಗಳ ಜೀವನವನ್ನು ರೂಪಿಸುವುದಕ್ಕೆ ಸಾಧ್ಯವಾಗುತ್ತದೆ. ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ತಾನೇ ಟೆಲಿಗ್ರಾಂ ಮೂಲಕ ನನಗೊಂದು ವಿಷಯ ಬಂದಿದೆ. ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ.

ಅಧ್ಯಕ್ಷರು : ಒಂದ ನಿಮಿಷ, ಇದು ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ.

ಅಧ್ಯಕ್ಷರು : ಹಾಗಾದರೆ ಒಂದು ನಿಮಿಷ. ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಮೊದಲು ಸರ್ಕಾರದ ಪರವಾಗಿ ಉತ್ತರ ಕೊಡಲಿ. ನಂತರ ತಾವು ಮಾತನಾಡಬಹುದು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ಸರ್ಕಾರವೂ ಗಮನಕ್ಕೆ ತೆಗೆದುಕೊಂಡಿದೆ. ಎಂದು ಹೇಳಬಯಸುತ್ತೇನೆ.

5. ಶಿರಗುಪ್ಪದಲ್ಲಿ ರಸ್ತೆ ಅಗಲ ಮಾಡುವ ಕಾರಣದಿಂದ ಅಂಗಡಿ-ಮಳಿಗೆಗಳ ಧ್ವಂಸ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ಮೈನ್ ರೋಡ್‌ಗಳಲ್ಲಿ ಯಾವುದೇ ನೋಟೀಸನ್ನು ಕೊಡದೇ ರೋಡ್ ಅನ್ನು ಅಗಲ ಮಾಡುವಂತಹ ಕಾರಣ ಹೇಳಿ